# ‘ವಿರಾಟ’ರೂಪ ತೋರಿದ ಗಿಲ್

ಪ್ರವೀಣ ಕುಲಕರ್ಣಿ

ಹೈದರಾಬಾದ್‌ನಲ್ಲಿ ಕಳೆದ ವಾರ ನ್ಯೂಜಿಲೆಂಡ್ ವಿರುದ್ಧ ಭಾರತೀಯ ಕ್ರಿಕೆಟ್ ತಂಡ ಜಯ ಸಾಧಿಸಿದಾಗ ಅತ್ಯಂತ ಹೆಚ್ಚು ಸಂತಸಪಟ್ಟಿದ್ದು ಪಂಜಾಬ್‌ನ ಈ ರೈತನೇ ಇರಬೇಕು. ಪಂಜಾಬ್‌ನ ಚಕ್ ಜೈಮಲ್ ಸಿಂಗ್ ವಾಲಾ ಹಳ್ಳಿಯ ರೈತ ಲಖ್ವಿಂದರ್ ಸಿಂಗ್ ಅವರ ಎಣೆಯಿಲ್ಲದ ಹರ್ಷಕ್ಕೆ ವಿಶೇಷ ಕಾರಣವೂ ಉಂಟು. ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಬಾರಿಸಿದ ಅತ್ಯಂತ ಕಿರಿಯ ಆಟಗಾರ ಎಂಬ ಹಿರಿಮೆಗೆ ಒಳಗಾದ ಅವರ ಪುತ್ರ ಶುಭಮನ್ ಗಿಲ್ ಭಾರತದ ಆ ಗೆಲುವಿನಲ್ಲಿ ಮಹತ್ವದ ಪಾತ್ರವನ್ನೂ ವಹಿಸಿದ್ದರು.

ಲಖ್ವಿಂದರ್ ಸಿಂಗ್ ಅವರಿಗೆ ತಮ್ಮ ಪುತ್ರ ಕ್ರಿಕೆಟ್ ಆಟಗಾರನೇ ಆಗಬೇಕು ಎಂಬುದು ಎಷ್ಟೊಂದು ಹೆಬ್ಬಯಕೆ ಆಗಿತ್ತೆಂದರೆ ತಮ್ಮ ಹೊಲದಲ್ಲಿ ಪುತ್ರನಿಗಾಗಿಯೇ ಟರ್ಫ್ ಪಿಚ್ ನಿರ್ಮಿಸಿಕೊಟ್ಟಿದ್ದರು ಅವರು. ಪಿಚ್ ನಿರ್ಮಿಸಿಕೊಟ್ಟ ಮಾತ್ರಕ್ಕೆ ತಮ್ಮ ಪುತ್ರ ಪರಿಪೂರ್ಣ ಆಟಗಾರನಾಗಿ ರೂಪುಗೊಳ್ಳುವುದಿಲ್ಲ ಎನ್ನುವುದನ್ನು ಚೆನ್ನಾಗಿ ಅರಿತಿದ್ದ ಅವರು, ‘ನನ್ನ ಮಗನ ವಿಕೆಟ್ ಪಡೆದರೆ ನಿಮಗೆ ನೂರು ರೂಪಾಯಿ ಭಕ್ಷೀಸು’ ಎಂದು ಹಳ್ಳಿಯ ‘ಬೌಲರ್’ಗಳಿಗೆ ಸವಾಲು ಹಾಕುತ್ತಿದ್ದರು. ಹೀಗೆ ಮಗನಿಗೆ ಕ್ರಿಕೆಟ್‌ನ ಆರಂಭಿಕ ದೀಕ್ಷೆಯನ್ನು ಕೊಟ್ಟಿದ್ದು ಈ ಹಿರಿಯ ಸರ್ದಾರ್ಜಿಯೇ.



ಮಗ ಶುಭಮನ್ ಬ್ಯಾಟ್ಸ್‌ಮನ್ ಆಗುವ ಶುಭ ಲಕ್ಷಣ ಕಾಣಿಸಿದಾಗ, ಚಕ್ ಜೈಮಲ್ ಸಿಂಗ್ ವಾಲಾ ಹಳ್ಳಿಯನ್ನು ತೊರೆದು ಮೊಹಾಲಿಗೆ ಬಂದು ನೆಲೆ ನಿಂತವರು ಲಖ್ವಿಂದರ್ ಸಿಂಗ್. ಮುಂದೆ ಪಂಜಾಬ್ ಕ್ರಿಕೆಟ್ ಅಕಾಡೆಮಿ ಸೇರಿದ ಮೇಲೆ ಈ ಬ್ಯಾಟ್ಸ್‌ಮನ್ ಮತ್ತೆ ಹಿಂದಿರುಗಿ ನೋಡಿದ್ದಿಲ್ಲ. ದೊಡ್ಡ ಕ್ರಿಕೆಟಿಗನಾಗಿ ಬೆಳೆದರೂ ಶುಭಮನ್‌ಗೆ ಈಗಲೂ ಕೃಷಿ ಎಂದರೆ ಪಂಚಪ್ರಾಣವಂತೆ. ಕೃಷಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲೂ ಅವರು ಇಷ್ಟಪಡುತ್ತಾರಂತೆ. ಆದರೆ, ಬ್ಯಾಟಿಂಗ್‌ಗೆ ನಿಂತರೆ ಎದುರಾಳಿ ತಂಡವನ್ನು ಚೆಂಡಾಡಿಬಿಡುವ ಈ ಹುಡುಗನೆಂದರೆ ಭಾರತೀಯ ಕ್ರಿಕೆಟ್ ದಿಗ್ಗಜರಿಗೆಲ್ಲ ಅಚ್ಚುಮೆಚ್ಚು. 19 ವರ್ಷದೊಳಗಿನವರ ವಿಶ್ವಕಪ್ ತಂಡದಲ್ಲೂ ಇದ್ದ ಈ ಆರಂಭಿಕ ಬ್ಯಾಟ್ಸ್‌ಮನ್ ಬಗೆಗೆ ರಾಹುಲ್ ದ್ರಾವಿಡ್ ಅವರಿಗೆ ಅಪಾರ ಭರವಸೆ. ಸಚಿನ್ ತೆಂಡೂಲ್ಕರ್ ಮತ್ತು ವಿವಿಎಸ್ ಲಕ್ಷ್ಮಣ್ ಸಹ ಇವರ ಆಟವನ್ನು ಮನಸಾರೆ ಕೊಂಡಾಡಿದ್ದಾರೆ.

ದ್ವಿಶತಕ ಸಿಡಿಸಿದ ಅತ್ಯಂತ ಯುವ ಆಟಗಾರ ಎಂಬ ಹಿರಿಮೆಗೆ ಪಾತ್ರವಾಗಿರುವ ಶುಭಮನ್‌ಗೆ ಶತಕ ಸಿಡಿಸುವುದು ಮಾಮೂಲಿ ಕೆಲಸ ಎನಿಸಿಬಿಟ್ಟಿದೆ. 2018ರಲ್ಲಿ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿ ಹೊರಹೊಮ್ಮುವಲ್ಲಿ ಶುಭಮನ್ ನಿರ್ಣಾಯಕ ಪಾತ್ರ ವಹಿಸಿದ್ದರು. ಟೂರ್ನಿಯಲ್ಲಿ ಸರಾಸರಿ 124 ರನ್‌ನಂತೆ 372 ರನ್ ಗಳಿಸಿದ್ದ ಅವರು, ಟೂರ್ನಿಯ ಸರ್ವೋತ್ತಮ ಆಟಗಾರನ ಕಿರೀಟವನ್ನೂ ತೊಟ್ಟಿದ್ದರು. ಆಗ, ಸೆಮಿ ಫೈನಲ್‌ನಲ್ಲಿ ಪಾಕಿಸ್ತಾನದ ವಿರುದ್ಧ ಅಜೇಯ ಶತಕ ಬಾರಿಸಿದ್ದು, ಕ್ರಿಕೆಟ್ ಪ್ರೇಮಿಗಳ ಮನದಲ್ಲಿ ಸದಾಕಾಲ ಉಳಿಯುವಂಥದ್ದು.

ಶುಭಮನ್ ಅವರನ್ನು ಅಭಿಮಾನಿಗಳು ‘ಮುಂದಿನ ವಿರಾಟ್ ಕೊಹ್ಲಿ’ ಎಂದೂ ಕರೆಯುವುದುಂಟು. ಬಾಂಗ್ಲಾದೇಶ ತಂಡದ ವಿರುದ್ಧ ದ್ವಿಶತಕ ಸಿಡಿಸಿದ್ದ ಇಶಾನ್ ಕಿಷನ್, ಭಾರತದ ಮಹತ್ವದ ಆರಂಭಿಕ ಬ್ಯಾಟ್ಸ್‌ಮನ್‌ಗಳಲ್ಲಿ ಒಬ್ಬರೆನಿಸಿದ ಶಿಖರ್ ಧವನ್ ಅವರಂತಹ ಆಟಗಾರರನ್ನೂ ಹಿಂದಿಕ್ಕಿ ತಂಡದಲ್ಲಿ ಸ್ಥಾನ ಪಡೆದದ್ದೇ ಶುಭಮನ್ ಅವರ ಬ್ಯಾಟಿಂಗ್ ತಾಕತ್ತು ಎಂತಹದ್ದು ಎಂಬುದನ್ನು ನಿರೂಪಿಸುತ್ತದೆ. ಹ್ಯಾಟ್ರಿಕ್ ಸಿಕ್ಸರ್‌ಗಳ ಮೂಲಕ ದ್ವಿಶತಕವನ್ನು ಪೂರೈಸಿದ ಈ ಬ್ಯಾಟ್ಸ್‌ಮನ್, ಚೆಂಡಿನ ಮೇಲೆ ತಾವು ಎಷ್ಟೊಂದು ನಿರ್ದಯಿ ಎಂಬುದನ್ನೂ ಸಾರಿದ್ದಾರೆ. ಚೆಂಡನ್ನು ಬೌಂಡರಿಗೆ ಅಟ್ಟುವಲ್ಲಿ ಆನಂದ ಕಾಣುವ ಈ ಆಟಗಾರ, ಚುರುಕಿನ ಪಾದಚಲನೆಯಿಂದ, ಕಲಾತ್ಮಕ ಹೊಡೆತಗಳಿಂದ, ಬ್ಯಾಟಿಂಗ್ ತಂತ್ರಗಾರಿಕೆಯಿಂದ ಗಮನ ಸೆಳೆದವರು.

ಅಂಗಳದ ಆಚೆಗೂ ಶುಭಮನ್ ಸುದ್ದಿಯಲ್ಲಿರುವವರು. ಸಚಿನ್ ಅವರ ಪುತ್ರಿ ಸಾರಾ ಮತ್ತು ಶುಭಮನ್ ಮದುವೆಯಾಗಲಿದ್ದಾರೆ ಎನ್ನುವ ಸುದ್ದಿ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ಸದ್ದು ಮಾಡಿದೆ. ‘ಶುಭಮನ್ ಅವರು ಪ್ರೇಮಪಾಶದಲ್ಲಿ ಬಿದ್ದಿರುವುದು ಸಚಿನ್ ಪುತ್ರಿ ಸಾರಾ ಜತೆಗಲ್ಲ, ಸಾರಾ ಅಲಿಖಾನ್ ಅವರೊಂದಿಗೆ. ಸುಖಾಸುಮ್ಮನೆ ಗೊಂದಲಕ್ಕೆ ದೂಡಬೇಡಿ’ ಎಂದು ಕೆಲವರು ಚರ್ಚೆಗೆ ಹೊಸಬಣ್ಣ ತುಂಬಿದ್ದಾರೆ. ಆದರೆ, ಈ ಸುದ್ದಿಗಳನ್ನು ಯಾವ ಸಾರಾ ಆಗಲಿ ಖಚಿತಪಡಿಸಿಲ್ಲ ಇಲ್ಲವೇ ನಿರಾಕರಿಸಿಲ್ಲ. ಹೀಗಾಗಿ ಗಾಳಿಸುದ್ದಿ, ಗಾಳಿಯಲ್ಲಿ ತೇಲಾಡುತ್ತಲೇ ಇದೆ.

ಇನ್ನು ಶುಭಮನ್ ಅವರು ಫಿಟ್‌ನೆಸ್ ವರ್ಕ್ ಹೇಗೆ ಮಾಡುತ್ತಾರೆ ಎಂದು ಹುಡುಗರು ಗೂಗಲ್ ಮಾಡಿ ನೋಡಿದ್ದೇ ನೋಡಿದ್ದು. ಬೆಂಚ್‌ನಲ್ಲಿ ಕುಳಿತ ಬ್ಯಾಟ್ಸ್‌ಮನ್‌ಗಳಿಗೆ ಇನ್ನು ಎಲ್ಲಿ ಕಾಯಂ ಬೆಂಚೇ ಗತಿ ಆಗುವುದೋ ಎಂಬ ಚಿಂತೆ. ಎದುರಾಳಿ ಬೌಲರ್‌ಗಳಿಗೆ ಚೆಂಡು ಅಂಗಳಾಚೆಗೆ ಎಲ್ಲಿಗೆ ಹೋಗಿ ಬೀಳುವುದೋ ಎಂಬ ಆತಂಕ. ಅಂತೂ ಶುಭಮನ್ ಎಲ್ಲರನ್ನೂ ‘ಎಂಗೇಜ್’ ಆಗಿಟ್ಟಿದ್ದಾರೆ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65